329 (326) ಶ್ರೀ ಧ್ರುವನಾರಾಯಣ್ ಆರ್ (ಸಂತೇಮರಳ್ಳಿ) : ಸಹಕಾರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ಸಾಲವನ್ನು ಮನ್ನಾ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಜಿ.ಟಿ. ದೇವೇಗೌಡ (ಸಹಕಾರ ಸಚಿವರು) :

ಅ) ಮತ್ತು ಆ) ಸಹಕಾರ ಸಂಸ್ಥೆಗಳು ರೈತರಿಗೆ ನೀಡಿರುವ ಕೃಷಿ ಸಾಲಗಳನ್ನು ಮನ್ನಾ ಮಾಡುವ ಪ್ರಸ್ತಾವವು ಸರ್ಕಾರದ ಪರಿಶೀಲನೆಯಲಲಿ ಬರುತ್ತದೆ.

330 (327) ಶ್ರೀ ಧ್ರುವನಾರಾಯಣ್ ಆರ್ (ಸಂತೇಮರಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾನೂನು ಬಾಹಿರವಾಗಿ ವಾಹನಗಳಲ್ಲಿ ಅಧಿಕ ಭಾರ ಹಾಕಿ ವಾಹನ ಸಂಚಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

ಇ) ಅಧಿಕ ಭಾರದ ವಾಹನ ಚಾಲನೆಯಿಂದ ರಸ್ತೆಗಳು ಹಾಳಾಗುತ್ತಿರುವುದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎನ್. ಚಲುವನಾರಾಯಣಸ್ವಾಮಿ (ಸಾರಿಗೆ ಸಚಿವರು):

ಅ) ಬಂದಿದೆ

ಆ) ಸಾರಿಗೆ ಇಲಾಖೆಯು ಅಧಿಕ ಭಾರದ ಸರಕು ಸಾಗಿಸುವ ವಾಹನಗಳನ್ನು ತಪಾಸಣೆ ನಡೆಸಿ, ತಪ್ಪಿತಸ್ಥ ಚಾಲಕರ ಮಾಲೀಕರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲು ರಾಜ್ಯದ ಎಲ್ಲ ಪ್ರಾದೇಶಿಕ /ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಕಾಲ ಕಾಲಕ್ಕೆ ಸುತ್ತೋಲೆಗಳನ್ನು ನೀಡಿ ಸೂಚಿಸಲಾಗಿರುತ್ತದೆ.

ಇ) ಸಾರಿಗೆ ಇಲಾಖೆಯು ಅಧಿಕ ಭಾರದ ವಾಹನ ಚಾಲನೆಯಿಂದ ರಸ್ತೆಗಳು ಹಾಳಾಗುತ್ತಿರುವುದನ್ನು ತಡೆಗಟ್ಟಲು ನಿರಂತರವಾಗಿ ತನಿಖಾ ಕಾರ್ಯಗಳನ್ನು ಕೈಗೊಳ್ಳುವುದರ ಜೊತೆಗೆ ವಿಶೇಷ ತನಿಖಾ ತಂಡಗಳನ್ನು

ರಚಿಸಿ, ಆಯ್ದ ಸ್ಥಳಗಳಲ್ಲಿ ನಿಯೋಜಿಸಿ ತಪಾಸಣೆ ನಡೆಸಲಾಗುತ್ತಿದೆ ಹಾಗೂ ಸಾರಿಗೆ ಇಲಾಖೆಯು ಹೆದ್ದಾರಿ ಪ್ರಾಧಿಕಾರ ಮತ್ತು ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಅಧಿಕ ಭಾರದ ಅದಿರು ಸಾಗಾಣಿಕೆ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ. 2006–07ನೇ ಸಾಲಿನಲ್ಲಿ ಡಿಸೆಂಬರ್ 2006ರ ಅಂತ್ಯದವರೆಗೆ ಒಟ್ಟು 4,80,236 ವಾಹನಗಳನ್ನು ತಪಾಸಣೆ ಮಾಡಿ, 18,545 ವಾಹನಗಳ ಚಾಲಕರ/ಮಾಲೀಕರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ರೂ. 8,92,12,601/ಗಳ ರಾಜೀದಂಡವನ್ನು ಈ ಅವಧಿಯಲ್ಲಿ ವಸೂಲಿ ಮಾಡಲಾಗಿದೆ.

331 (328) ಶ್ರೀ ಧ್ರುವನಾರಾಯಣ್ ಆರ್ (ಸಂತೇಮರಳ್ಳಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಮತ್ತು 2006–07ನೇ ಸಾಲಿನಲ್ಲಿ ಕೇಂದ್ರ ರಸ್ತೆ ನಿಧಿ ಹಾಗೂ ನಬಾರ್ಡ್ ಯೋಜನೆಯಡಿಯಲ್ಲಿ ರಾಜ್ಯಕ್ಕೆ ಮಂಜೂರಾದ ಹಣವೆಷ್ಟು;

ಆ)ಸದರಿ ಸಾಲುಗಳಲ್ಲಿ ಈ ಯೋಜನೆಯಡಿಯಲ್ಲಿ ಚಾಮರಾಜನಗರ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯ 5 ವಿಧಾನ ಸಭಾ ಕ್ಷೇತ್ರಗಳಿಗೆ ಹಂಚಿಕೆಯಾಗಿರುವ ಹಣವೆಷ್ಟು (ಜಿಲ್ಲಾವಾರು ಮತ್ತು ಕ್ಷೇತ್ರವಾರು ವಿವರ ನೀಡುವುದು);

ಇ) ಕರ್ನಾಟಕ ರಾಜ್ಯ ಹೆದ್ದಾರಿ ವತಿಯಿಂದ ಚಾಮರಾಜನಗರ ಜಿಲ್ಲೆಗೆ 2005–06, 2006–07ನೇ ಸಾಲಿನಲ್ಲಿ ಮಂಜೂರಾದ ಹಣವೆಷ್ಟು ಹಾಗೂ ಸಂತೇಮರಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ 2005–06, 2006–07ನೇ ಸಾಲಿನಲ್ಲಿ ಮಂಜೂರಾದ ಹಣವೆಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಕೇಂದ್ರ ರಸ್ತೆ ನಿಧಿ ಯೋಜನೆಯಲ್ಲಿ 2005–06 ರಲ್ಲಿ 110.20 ಕೋಟಿ ರೂ. ಹಾಗೂ 2006–07ನೇ ಸಾಲಿನಲ್ಲಿ 127.45 ಕೋಟಿ ರೂ.ಗಳು ಮಂಜೂರಾಗಿದೆ. ನಬಾರ್ಡ್ ಯೋಜನೆಯಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ 2005–06ರಲ್ಲಿ 258.90 ಕೋಟಿ ರೂ ಹಾಗೂ 2006–07ರ ಮೊದಲ ಹಂತದಲ್ಲಿ ಈವರೆಗೆ 228.18 ರೂ.ಗಳ ಮೊತ್ತದ ಕಾಮಗಾರಿಗಳು ಮಂಜೂರಾಗಿದೆ.